71

ಮೈಸೂರ ಗೆಜೆಟ್.

ಸಂ. XXXI.] ಸರಕಾರದಿಂದ ಪಾಯಿಷ್ ಆದ್ದು [ನಂ. 5.

ಬೆಂಗಳೂರು, ಗುರುವಾರ, ಫಿಬ್ರವರಿ ತಾ॥ 6, ಸ್ರ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇನ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕಸ್ ಆಫಿಸರಗಳು, ಫಾರೆಸ್ಟ್ರು, ರಜಿಸ್ಟ್ರೇರ್ಸ ವ ಡುಡ್ಯೂ ಕೇರ್ಸ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋಡ್ರ್ ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೋಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ರು ಆಫಿಸರಗಳು ಇವರುಗಳಿಂದ ಕೊಡೋಣಾದ ಇನ್ತಿಹಾರ್ಗಳು ಮಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್ ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಗಳು ವ ರೆಗ್ಯುಲೇರ್ಷನ್ಗಳು.—ಇಲ್ಲ.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

ಸೂಚನೆ—ಭಾಗಗಳನ್ನು ಪ್ರತ್ಯೇಕ್ಷ ಸೇರಿಸಿ ಇಡುವ ಬಗ್ಗೆ ಪೇರೆ ಪೇರೆಯಾಗಿ ಪುಟ ನಂಬೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇನ್ತಿಹಾರ್ನಾಮೆಗಳು.

ರೆವಿನ್ಯೂ.

ತಾರೀಖು 6ನೇ ಜನವರಿ 1896.

ನಂ. 5854.—ರೆ. 2285.—1888ನೇ ಇಸವಿ IVನೇ ನಂಬರ್ ರೆಗ್ಯುಲೇರ್ಷ ಆದ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನ್ 2ನೇ ಪ್ಯಾರಾ ಅನುಸರಿಸಿ, ಮೈಸೂರು ಗವರ್ಮೆಂಟಿನವರು ಆಜ್ಞಾಪಿಸುವದೇನಂದರೆ, ಸದರೀ ಕೋಡಿನ VIII ಮತ್ತು IXನೇ ಅಧ್ಯಾಯಗಳ ನಿಯಮಗಳು ಮಂಡ್ಯ ತಾಲ್ಲೂಕಿನ ಕಾಯಂಗುತ್ತಾ ಅಂಕುಶಾಪುರ ಗ್ರಾಮಕ್ಕೆ ಲಗಾವ್ ಮಾಡಲ್ಪಡತಕ್ಕದ್ದು.

ನಂ. 5918.—ಫೈ. 349.—ಗವರ್ಮೆಂಟಿನವರು, 1891ನೇ ಇಸವಿ ಅಕ್ಟೋಬರ್ 27ನೇ ಮಾರ್ಚ್ಗಂ 305ನೇ ನಂಬರ್ ಇನ್ತಿಹಾರ್ನಾಮೆಯೊಡನೆ ಫಾಯಿಷ್ಮಾಡಲ್ಪಟ್ಟ ಮೈಸೂರು ಸ್ಟೇಟ್ ಲೈಫ್ ಇನ್ಷ್ಯೂರೆನ್ಸ ರೂಲ್ಸಿನ 21ನೇ ರೂಲಿಗೆ ಬದಲಾಗಿ ಇದರ ಡಿ ಬರುವದನ್ನು ಸೇರಿಸತಕ್ಕದ್ದೆಂದು ಆಜ್ಞಾಪಿಸುತ್ತಾರೆ:—

21 "ಸೆಕ್ರಿಟೆರಿಯವರು, ಪೋಲಿಸ ಪತ್ರವನ್ನು ಭೀಮಾದಾರನಿಗೆ ಮೊದಲನೇ ಪ್ರಿಮಿಯಂ ಯಾನೆ ಚಂದಾ ಪಾವತಿ ಮಾಡಿದ ತರುವಾಯ ಕೊಡುವ ಬಗ್ಯಾಗಿ ಸದರೀ ಭೀಮಾದಾರನು ವಾಸವಾಗಿರುವಂಥಾ ಡಿಸ್ಟ್ರಿಕ್ಟಿನ ಟ್ರೆಜರಿ ಆಫಿಸರ ಬಳಿಗೆ ಕಳುಹಿಸತಕ್ಕದ್ದು. ಮೊದಲನೇ ಚಂದಾ ವೊಬಲಗು ಪಾವತಿ ಮಾಡಿದ ತಾರೀಖು ಭೀಮಾ ಪತ್ರದ ತಾರೀಖಾಗಿ ಇರತಕ್ಕದ್ದು ಮತ್ತು ಭೀಮಾ ಪತ್ರವನ್ನ ಕೊಡುವದಕ್ಕೆ ಮುಂಚಿತವಾಗಿ ಸದರೀ ತಾರೀಖು ಭೀಮಾ ಪತ್ರದಲ್ಲಿ ಟ್ರೆಜರಿ ಆಫಿಸರಿಂದ ನಮೂದಿಸಲ್ಪಡತಕ್ಕದ್ದು. ಬಂದು ಭೀಮಾ ಪತ್ರವು ಡಿಸ್ಟ್ರಿಕ್ಟು ಟ್ರೆಜರಿಯಿಂದಲಾಗಲಿ ಅಥವಾ ಅದು ಪಾವತಿ ಬಗ್ಯೆ ಕಳುಹಿಸಲ್ಪಟ್ಟರಬಹುದಾದಂಥಾ ತಾಲ್ಲೂಕು ಟ್ರೆಜರಿಯಿಂದಲಾಗಲಿ ಅದು ತಲಪಿದ ತಾರೀಖು ಲಾಗಾಯತು ಬಂದು ತಿಂಗಳ ವಳಗಾಗಿ ತೆಗದುಕೊಳ್ಳಲ್ಪಡದಿದ್ದರೆ ಆ ಸಂಗತಿಯು ಸೆಕ್ರಿಟೆರಿಯವರಿಗೆ ರಿಪೋರ್ಟು ಮಾಡಲ್ಪಡತಕ್ಕದ್ದು; ಅವರು ವರಿಜನಲ್ ಮೆಡಿಕಲ್ ಸರ್ಟಿಫಿಕೇಟ್ ಹಾಜರ್ಮಾಡಲ್ಪಟ್ಟ ಕಾಲದಿಂದ ಆರು ತಿಂಗಳ ವಳಗಾಗಿ ಇದ್ದಪಕ್ಷದಲ್ಲಿ ಬಂದು ಸಾಧಾರಣ ಮೆಡಿಕಲ್ ಸರ್ಟಿಫಿಕೇಟ್, ಪುನಃ ಹಾಜರ್ಮಾಡುವಂತೆ ಭೀಮಾದಾರನಿಗೆ ಯಚ್ಚರಿಸತಕ್ಕದ್ದು.

ತಾರೀಖು 9ನೇ ಜನವರಿ 1896.

ನಂ. 6128.—ರೆ. 2275.–1888ನೇ ಇಸವಿ IVನೇ ನಂಬರ್ ರೆಗ್ಯುಲೇರ್ಷ್ ಆದ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷ್ 2ನೇ ಪ್ಯಾರಾ ಅನುಸರಿಸಿ, ಮೈಸೂರು ಗವರ್ಮೆಂಟಿನವರು ಆಜ್ಞಾಪಿಸುವದೇನಂದರೆ, ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳು, ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿರುವ ಸರ್ವೆ ಯಿನಾಂ ಬಸವನಹಳ್ಳಿ ಗ್ರಾಮಕ್ಕೆ ಲಗಾವ್ಮಾಡಲ್ಪಡತಕ್ಕದ್ದು.

ನಂ. 6154.—ಫೈ. 366.—ಮೈಸೂರು ಗವರ್ಮೆಂಟಿನವರು ಆಜ್ಞಾಪಿಸುವದೇನಂದರೆ, 1891ನೇ ಇಸವಿ ಅಕ್ಟೋಬರ್ 27ನೇ ಮರ್ತ್ಯಂ 305ನೇ ನಂಬರ್ ಇಸ್ತಿಹಾರ್‌ನಾಮೆಯೊಡನೆ ಫಾಯಿಷ್ ಮಾಡಲ್ಪಟ್ಟು, 1892ನೇ ಇಸವಿ ಮೇ 16ನೇ ಮರ್ತ್ಯಂ 67ನೇ ನಂಬರು ಮತ್ತು 1895ನೇ ಇಸವಿ ಜೂ 19ನೇ ಮರ್ತ್ಯಂ 23838.—ರೆ. 3466ನೇ ನಂಬರು ಮತ್ತು 1896ನೇ ಇಸವಿ ಜನವರಿ 6ನೇ ಮರ್ತ್ಯಂ 5918.—ಫೈ. 349ನೇ ನಂಬರ್ ಈ ಇಸ್ತಿಹಾರ್‌ನಾಮೆಗಳಿಂದ ತಿದ್ದುಪಾಟುದ ಮೈಸೂರು ಸ್ಟೇಟ್ ಲೈಫ್ ಇನ್ಸ್ಯೂರೆನ್ಸ್ ರೂಲಿನ 21ನೇ ಪ್ಯಾರಾಕ್ಕೆ ಬದಲಾಗಿ ಇದರಡಿ ಬರುವದನ್ನು ಸೇರಿಸತಕ್ಕದ್ದು.

ಪ್ಯಾರಾ 21. "ಸೆಕ್ರಿಟೆರಿಯವರು, ಪೋಲಿಸ ಪತ್ರವನ್ನು ಭೀಮಾದಾರನಿಗೆ ಮೊದಲನೇ ಪ್ರಿಮಿಯಂ ಯಾನೆ ಚಂದಾ ಪಾವತಿ ಮಾಡಿ
" ದ ತರುವಾಯ ಕೊಡುವ ಬಗ್ಯಾಗಿ, ಸದರೀ ಭೀಮಾದಾರನು ವಾಸವಾಗಿರುವಂಥಾ ಡಿಸ್ಟ್ರಿಕ್ಟಿನ ಟ್ರೆಜರಿ ಆಫಿಸರ ಬಳಿಗೆ ಕಳುಹಿಸತ
" ಕ್ಕದ್ದು. ಮೊದಲನೇ ಚಂದಾ ವೊಬಲಗು ಪಾವತಿ ಮಾಡಿದ ತಾರೀಖು ಭೀಮಾ ಪತ್ರದತಾರೀಖಾಗಿ ಇರತಕ್ಕದ್ದು, ಮತ್ತು
" ಭೀಮಾ ಪತ್ರವನ್ನ ಕೊಡುವದಕ್ಕೆ ಮುಂಚಿತವಾಗಿ ಸದರೀ ತಾರೀಖು ಭೀಮಾ ಪತ್ರದಲ್ಲಿ ಟ್ರೆಜರಿ ಆಫಿಸರಿಂದ ನಮೂದಿಸತಕ್ಕದ್ದು.
"ಬಂದು ಭೀಮಾ ಪತ್ರವು ಡಿಸ್ಟ್ರಿಕ್ಟು ಟ್ರೆಜರಿಯಿಂದಲಾಗಲಿ ಅಥವಾ ಅದು ಪಾವತಿ ಬಗ್ಯೆ ಕಳುಹಿಸಲ್ಪಟ್ಟರಬಹುದಾದಂಥಾ ತಾಲ್ಲೂ
" ಕು ಟ್ರೆಜರಿಯಿಂದಲಾಗಲಿ ಅದು ಅಲ್ಲಿಗೆ ತಲಪಿದ ತಾರೀಖು ಲಾಗಾಯತು ಬಂದು ತಿಂಗಳ ವಳಗಾಗಿ ತೆಗದುಕೊಳ್ಳಲ್ಪಡದಿದ್ದರೆ ಆ
" ಸಂಗತಿಯು ಸೆಕ್ರಿಟೆರಿಯವರಿಗೆ ರಿಪೋರ್ಟು ಮಾಡಲ್ಪಡತಕ್ಕದ್ದು; ಅವರು ಭೀಮಾದಾರನಿಗೆ ತನ್ನ ಆರೋಗ್ಯ ಸ್ಥಿತಿ ಕುರಿತು ಬಂದು
" ಸಾಧಾರಣವಾದ ಮೆಡಿಕಲ್ ಸರ್ಟಿಫಿಕೇಟ್ ಹಾಜರ್ಮಾಡುವಂತೆ ತಗಾವೆ ಮಾಡತಕ್ಕದ್ದು, ಅಂಥಾ ಸರಟಿಫಿಕೇಟ್ ಪಡೆಯುವ ಬಗ್ಯಾಗಿ
" ಭೀಮಾದಾರನು, ಒರಿಜಿನಲ್ ಮೆಡಿಕಲ್ ಸರಟಿಫಿಕೇಟಿನ ತಾರೀಖು ಲಾಗಾಯತು ಆರು ತಿಂಗಳೊಳಗಾಗಿ ಇದ್ದಪಕ್ಷದಲ್ಲಿ ಆತನ
" ತಲಬಿನ ಮೇಲೆ ಕೇಕಡಾ ಐದರಂತೆ ಆಗುವ ಮೊಬಲಗು ಅಂದರೆ ವಂದು ರೂಪಾಯಿಗೆ ಕಮ್ಮಿ ಯಿಲ್ಲದಂತೆಯೂ ಐದು ರೂಪಾ
" ಯಿಗಳಿಗೆ ಜಾಸ್ತಿ ಆಗದಂತೆಯೂ ಆಗುವ ಫೀಜನ್ನು ಮೆಡಿಕಲ್ ಆಫಿಸರಿಗೆ ಪಾವತಿ ಮಾಡತಕ್ಕದ್ದು; ಆರುತಿಂಗಳಿಗೆ ವಿಾರಿ ಯಿದ್ದ
" ಸಂದರ್ಭದಲ್ಲಿ ಭೀಮಾದಾರನ ತಲಬಿನ ಮೇಲೆ ಕೇಕಡಾ ಹತ್ತರ ಪ್ರಕಾರ ಅಂದರೆ ಮೂರು ರೂಪಾಯಿಗೆ ಕಮ್ಮಿಯಿಲ್ಲದೆಯೂ
" ಹದಿನೈದು ರೂಪಾಯಿಗಳಿಗೆಜಾಸ್ತಿ ಆಗದೆಯೂ ಇರುವ ಫೀಜ್ ವೊಬಲಗನ್ನು ಮೆಡಿಕಲ್ ಆಫಿಸರಿಗೆ ಪಾವತಿಮಾಡಿ ಹೊಸದಾಗಿ
" ಬಂದು ತಪಶೀಲ್ ಸರಟಿಫಿಕೇಟನ್ನು ಪಡೆಯತಕ್ಕದ್ದು".

ತಾರೀಖು 18ನೇ ಜನವರಿ 1896.

ನಂ. 6433.—ಆರ್. 2471.–1888ನೇ ಇಸವಿ IVನೇ ನಂಬರ್ ರೆಗ್ಯುಲೇರ್ಷ್‌ಯಾನೆ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷ್ 2ನೇ ಪ್ಯಾರಾ ಅನುಸರಿಸಿ, ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳು ಹೊಸಕೋಟೆ ತಾಲ್ಲೂಕು ಗುಬ್ಬಿ ಹೋಬಳಿಗೆ ಕೇರಿದ ಜೋಡಿ ನಾಡಗವುಡ ಗೊಲ್ಲಹಳ್ಳಿಗೆ ಲಗಾವಾಗತಕ್ಕದ್ದಾಗಿ ಮೈಸೂರು ಸರ್ಕಾರದವರು ಆಜ್ಞಾಪಿಸುತ್ತಾರೆ.

ತಾರೀಖು 24ನೇ ಜನವರಿ 1896.

ನಂ. 6080.—ರೆ. 2584.–ಮೈಸೂರ್ ಸರ್ವಿಸ್ ರೆಗ್ಯುಲೇರ್ಷ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರು ಡಿಸ್ಟ್ರಿಕ್ಟ್ ಪ್ರೋಹಿಬಿಷನರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ಸ್ ವಿ. ಆರ್. ತ್ಯಾಗರಾಜಅಯ್ಯರ್ ಯಂ. ಎ. ಯವರಿಗೆ, 1896ನೇ ಇಸವಿ ಜನವರಿ 13ನೇ ಮರ್ತ್ಯಂ ಲಾಗಾಯತು 8 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 27ನೇ ಜನವರಿ 1896.

ನಂ. 6755.—ರೆ. 2605.—ಮೈಸೂರ್ ಸರ್ವಿಸ್ ರೆಗ್ಯುಲೇರ್ಷ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಗೋರೇಬಿದನೂರು ತಾ ಲ್ಲೂಕು ಆಮಲ್ದಾರ್ ಟಿ. ಯಂ. ನಾರಣಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಬಂದು ತಿಂಗಳ ಪ್ರಿವಿ ಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಟಿ. ಯಂ. ನಾರಣಯ್ಯನವರು ರಜಾದಮೇಲೆ ಇರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತರ ಸದರೀ ತಾಲ್ಲೂಕು ಶಿರಸ್ತೇದಾರ್ ತಿರುಮಲಾಚಾರ್ರು ಡಿಟೋ ತಾಲ್ಲೂಕು ಚಾರ್ಜು ವಹಿಸಿರತಕ್ಕದ್ದು.

ನಂ. 6786.—ರೆ. 2628.—ಮೈಸೂರ್ ಸರ್ವಿಸ್ ರಗ್ಯುಲೇಷ್ಣಗಳ 172ನೇ ಆರ್ಟಿಕಲ್ ಅನುಸರಿಸಿ, ಆನೇಕಲ್ ತಾಲ್ಲೂಕು ಅಮಲ್ದಾರ್ ಬಿ. ಶ್ರೀನಿವಾಸರಾಯರಿಗೆ, 1896ನೇ ಇಸವಿ ಜನವರಿ 20ನೇ ಮಾರ್ಕ್ಕಂ ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು ಆರು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಬಿ. ಶ್ರೀನಿವಾಸರಾಯರು ರಜಾದಮೇಲೆ ಇರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತರ ಸದರೀ ತಾಲ್ಲೂಕು ಶಿರಸ್ತೇದಾರ್ರು ಡಿಟೋ ತಾಲ್ಲೂಕಿನ ಚಾಲತಿ ಕೆಲಸಗಳ ಚಾರ್ಜನ್ನು ವಹಿಸಿರತಕ್ಕದ್ದು.

ತಾರೀಖು 28ನೇ ಜನವರಿ 1896.

ನಂ. 6677.—ಫೈ. 336.—ಚೀಫ್ ಸೆಕ್ರಟೆರಿ ಮೆಸ್ಸರ್ ಟಿ. ಆನಂದರಾಯರಿಗೆ, 1895ನೇ ಇಸವಿ ಅಕ್ಟೋಬರ್ 25ನೇ ಮಾರ್ಕ್ಕಂ 3941—ಫೈ. 210ನೇ ನಂಬರ್ ಗವರ್ಮೆಂಟ್ ಇಸ್ತಿಹಾರಿನಾಮೆಯಿಂದ ಮೆಡಿಕಲ್ ಸರ್ಟಿಫಿಕೇಟ್ ಮೇಲೆ ಕೊಡಲ್ಪಟ್ಟ ರಜಾ ಇದರ ದೆಶೆಯಿಂದ ಇನ್ನೂ ಮೂರು ತಿಂಗಳ ಪರಿಯಂತ ಜಾಸ್ತಿಮಾಡಲ್ಪಟ್ಟಿರುತ್ತೆ.

ನಂ. 6851.—ರೆ. 2672.—ಮೈಸೂರ್ ಸರ್ವಿಸ್ ರೆಗ್ಯುಲೇಷ್ಣಗಳ 172ನೇ ಆರ್ಟಿಕಲ್ ಮೇರೆ, ಶ್ರೀರಂಗಪಟ್ಟಣದ ಡೆಪ್ಯುಟಿ ಅಮಲ್ದಾರ್ ಡಿ. ಸುಬ್ಬರಾಯರಿಗೆ, ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖು ಲಾಗಾಯತು 10 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸುಬ್ಬರಾಯರು, ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸದರೀ ತಾಲ್ಲೂಕು ಅಮಲ್ದಾರರು ತಮ್ಮ ಕೆಲಸಗಳೊಂದಿಗೆ ಡೆಪ್ಯುಟಿ ಅಮಲ್ದಾರ್ರ ಆಫೀಸ್ ಚಾರ್ಜನ್ನು ವಹಿಸಿರತಕ್ಕದ್ದು.

ನಂ. 6854.—ರೆ. 2675.—ಮೈಸೂರ್ ಸರ್ವಿಸ್ ರಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ, ಸಿರಾ ತಾಲ್ಲೂಕು ಅಮಲ್ದಾರ್ ಎ. ವೇದಾಂತ ದೇಶಿಕಯ್ಯಂಗಾರ್ರಿಗೆ, 1896ನೇ ಇಸವಿ ಜನವರಿ 17ನೇ ಮಾರ್ಕ್ಕಮಿನಲ್ಲಿ ಒಂದು ದಿವಸದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತು.

ನಂ. 6857.—ರೆ. 2678.—ಮೈಸೂರ್ ಸರ್ವಿಸ್ ರೆಗ್ಯುಲೇಷ್ಣಗಳ 172ನೇ ಆರ್ಟಿಕಲ್ ಮೇರೆ, ಮಾಲೂರು ತಾಲ್ಲೂಕು, ಅಮಲ್ದಾರ್ ವಿ. ಎ. ಗೋಪಾಲರಾಯರಿಗೆ, 1895ನೇ ಇಸವಿ ಡಿಸೆಂಬರ್ 18ನೇ ಮಾರ್ಕ್ಕಂ ಲಾಗಾಯತು 14 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತು.

2. ಅಮಲ್ದಾರರು ರಜಾದ ಮೇಲಿದ್ದ ಕಾಲದಲ್ಲಿ ಶಿರಸ್ತೇದಾರರು ಸದರೀ ತಾಲ್ಲೂಕು ಚಾರ್ಜನ್ನು ವಹಿಸಿದ್ದರು.

ನಂ. 6860.—ರೆ. 2681.—1895ನೇ ಇಸವಿ ಆಗಸ್ಟ್ 27ನೇ ಮಾರ್ಕ್ಕಂ 2368.—ರೆ. 906ನೇ ನಂಬರ್ ಗವರ್ಮೆಂಟ್ ಇಸ್ತಿಹಾರ್ನಾಮೆಯಿಂದ ಹುಣಸೂರ್ ತಾಲ್ಲೂಕು ಅಮಲ್ದಾರ್ ಮಿರ್ ನೈಜಾಮುದ್ದೀ ಅಲ್ಲಿಖಾರವರಿಗೆ ಕೊಡಲ್ಪಟ್ಟ 5 ದಿವಸಗಳ ಕ್ಯಾಜುಯಲ್ ರಜಾ ಅವರ ಕೋರಿಕೆಯಂತೆ ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ತಾರೀಖು 29ನೇ ಜನವರಿ 1896.

ನಂ. 6798.—ರೆ. 2640.—ಮೈಸೂರ್ ಸರ್ವಿಸ್ ರಗ್ಯುಲೇಷ್ಣಗಳ 188ನೇ ಆರ್ಟಿಕಲ್ ಅನುಸರಿಸಿ, ಕುಣಿಗಲ್ ತಾಲ್ಲೂಕು ಅಮಲ್ದಾರ್ ವಿ. ಪಾರ್ಥಸಾರಥಯ್ಯಂಗಾರ್ರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ನಲವತ್ತು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ವಿ. ಪಾರ್ಥಸಾರಥಯ್ಯಂಗಾರ್ರು, ರಜಾದಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತರ ಹುಣಸೂರ್ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ತಿರುನಾರಣಯ್ಯಂಗಾರ್ರಿಗೆ ಕುಣಿಗಲ್ ತಾಲ್ಲೂಕಿನ ಅಮಲ್ದಾರ್ರ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತೆ.

ದಿವಾಣರವರ ಆಫಿಸ್ ಕ್ಲರ್ಕ್ ಎ. ಕೃಷ್ಣಸ್ವಾಮಯ್ಯಂಗಾರ್ ಬಿ. ಎ. ಯವರಿಗೆ, ತಿರುನಾರಣಯ್ಯಂಗಾರು ಇತರ ಕೆಲಸದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತರ; ಸಾತನೂರ್ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ರ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತೆ.

ನಂ. 6789.—ರೆ. 2631.—ಇದರಡಿಕಂಡ ಅಮಲ್ದಾರ್ರುಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

ಜಾರ್ಜಸಾಲೆ ಶ್ರೀನಿವಾಸರಾಯರು ಚಳ್ಳಕೆರೆ ತಾಲ್ಲೂಕಿನಿಂದ ಗೋರೇಬೆದನೂರು ತಾಲ್ಲೂಕಿಗೆ ಚಾರ್ಜು ವಪ್ಪಿಸಿದನಂತರ ಹೋಗತಕ್ಕದ್ದು.

ಟಿ. ಯಂ. ನಾರೆಣಯ್ಯನವರು ಗೋರೀಬಿದನೂರು ತಾಲ್ಲೂಕಿನಿಂದ ಚಳ್ಳಕೆರೆ ತಾಲ್ಲೂಕಿಗೆ, ರಜಾ ವಾಯಿದೆ ಮುಗಿದ ತರುವಾಯ ಹೋಗತಕ್ಕದ್ದು.

ನಂ. 6793.—ರೆ. 2635.—ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 188ನೇ ಆರ್ಟಿಕಲ್ ಅನುಸರಿಸಿ, ಹಾರ್ಸ್ ಡಿಸ್ಟ್ರಿಕ್ಟಿನಲ್ಲಿ ಜನರಲ್ ಡ್ಯೂಟಿ ಮೇಲೆ ಇರುವ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಜೆ. ಡಬ್ಲಿಯು. ನೈಟ್ ಯವರಿಗೆ, 1896ನೇ ಇಸವಿ ಫಿಬ್ರವರಿ 20ನೇ ಮುಕ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಬೆಂಗಳೂರು ಡಿಸ್ಟ್ರಿಕ್ಟಿನ ಪ್ರೊಬೇಷನರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಚಾಂಡಿ ಬಿ. ಎ. ಯವರಿಗೆ; ಮೆಸ್ಸರ್ ಜೆ. ಡಬ್ಲಿಯು. ನೈಟ್ ಯವರು, ರಜಾದ ಮೇಲೆ ಇರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ಕೆಲಸಕ್ಕೋಸ್ಕರ ಹಾರ್ಸ್ ಡಿಸ್ಟ್ರಿಕ್ಟಿಗೆ ಹಂಗಾಮಿ ತರೀಕ್ ವರ್ಗಮಾಡಲ್ಪಟ್ಟಿರುತ್ತೆ.

ಪ್ರೊಬೇಷನರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಯಂ. ಶಾಮರಾವ್ ಎಂ. ಎ. ಯವರಿಗೆ ಹಂಗಾಮಿ ತರೀಕ್ ಬೆಂಗಳೂರು ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿರುತ್ತೆ.

ತಾರೀಖು 30ನೇ ಜನವರಿ 1896.

ನಂ. 6777.—ರೆ. 2620.—ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 172ನೇ ಆರ್ಟಿಕಲ್ ಅನುಸರಿಸಿ, ರವಿನ್ಯೂ ಸೆಕ್ರಟೆರಿ ಮೆಸ್ಸರ್ ಸಿ. ಶ್ರೀನಿವಾಸಯ್ಯಂಗಾರ್ರಿಗೆ, 1896ನೇ ಇಸವಿ ಜನವರಿ 31ನೇ ಮುಕ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು ಹತ್ತು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 6805.—ರೆ. 2647.—ಆಲೂರು ಸಬ್ ತಾಲ್ಲೂಕಿನ ಡೆಪ್ಯೂಟಿ ಅಮಲ್ದಾರ್ ಎಸ್. ವೆಂಕಟರಮಣಯ್ಯನವರಿಗೆ; ಎ. ಕ್ರಿಷ್ಣೇ ಅರಸಿನವರು, ರಜಾದ ಮೇಲೆ ಇರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ ಚನ್ನರಾಯಪಟ್ಟಣ ತಾಲ್ಲೂಕು ಅಮಲ್ದಾರ್ ವ 3ನೇ ಕ್ಯಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ರಾಡಲ್ಪಟ್ಟಿರುತ್ತೆ.

ದಿವ್ಯಾರವರ ಆಫಿಸ್ ಕ್ಲರ್ಕ್ ಎಂ. ಕೃಷ್ಣಸ್ವಾಮಯ್ಯಂಗಾರ್ ಬಿ. ಎ. ಯವರಿಗೆ, ಎಸ್. ವೆಂಕಟರಮಣಯ್ಯನವರು ಇತರ ಕೆಲಸದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ ಆಲೂರು ಸಬ್ ತಾಲ್ಲೂಕಿನ ಡೆಪ್ಯೂಟಿ ಅಮಲ್ದಾರ್ ವ 3ನೇ ಕ್ಯಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ರಾಡಲ್ಪಟ್ಟಿರುತ್ತೆ.

ನಂ. 6780.—ರೆ. 2623.—ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 188ನೇ ಆರ್ಟಿಕಲ್ ಅನುಸರಿಸಿ, ಹುಜೂರು ಹಡ್ ಶಿರಸ್ತೇದಾರ್ ಮೆಸ್ಸರ್ ಸಿ. ರಾಮರಾಯರಿಗೆ, 1896ನೇ ಇಸವಿ ಫಿಬ್ರವರಿ 5ನೇ ಮುಕ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು ಯರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 31ನೇ ಜನವರಿ 1896.

ನಂ. 6802.—ರೆ. 2644.—ಗವರ್ಮೆಂಟಿನ ಅಂಡರ್ ಸೆಕ್ರಟೆರಿಯವರಾದ ಮೆಸ್ಸರ್ ಎಲ್. ಅನಂತಸಾಮಿರಾಯರು, ಮಾಹೆ ಮಜಕೂರು 31ನೇ ಮುಮ್ಮಿನ ಪೂರ್ವಾನ್ಹದಲ್ಲಿ ನವುಕರಿ ಮೇಲೆ ಮುಂಬಳಿ ಬಂದಿರುತ್ತಾರಾಗಿ 1895ನೇ ಇಸವಿ ಮೇ 30ನೇ ಮುಕ್ತಂ 21685—ಜ. 5670ನೇ ನಂ. ಗವರ್ಮೆಂಟ್ ಇಸ್ತಿಹಾರ್ನಾಮೆಯಿಂದ ಕೊಡಲ್ಪಟ್ಟ ಫರ್ಲೋ ರಜಾ ಪೈಕಿ ಉಳಿದ ಭಾಗ ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ನಂ. 6930.—ಫಾರೆಸ್ಟ್. ಎಫ್. 119–95 ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 171ನೇ ಆರ್ಟಿಕಲ್ ಮೇರೆ, ವಿಶೇಷ ಕೆಲಸದ ಮೇಲಿರುವ ಫಾರೆಸ್ಟ್ ಅಸಿಸ್ಟೆಂಟ್ ಕರ್ನಸರ್ವೇಟರ್ ಮೆಸ್ಸರ್ ಹೆಚ್. ಮುತ್ತಪ್ಪನವರಿ, 1896ನೇ ಇಸವಿ ಫಿಬ್ರವರಿ 5ನೇ ಮುಕ್ತಂ ಲಾಗಾಯತು ಅಥವಾ ಅವರದನ್ನುಪಯೋಗಿಸಿಕೊಳ್ಳುವ ತಾರೀಖಿನಿಂದ 5 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬರೋಜೇಬ್,
ಸಿ. ಶ್ರೀನಿವಾಸಯ್ಯಂಗಾರ್,
ರವಿನ್ಯೂ ಸೆಕ್ರಟೆರಿ.

ಜನರಲ್.

ತಾರೀಖು 15ನೇ ಜನವರಿ 1896.

ನಂ. 7853.—ಲೋ. ಫಂ. 257—92.—1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜೆಷ್ನ್ ರೆಗ್ಯುಲೇಷನಿನ ನಿಯಮಗಳನುಸರಿಸಿ, ಅದರಿಂದ ಪ್ರಕಟಪಡಿಸುವದೇನಂದರೆ,—ಇದರಡಿ ಕಂಡ ಷಟ್ಣಗಳು ಸರ್ಕಾರ್ ಕೆಲಸಕ್ಕೆ ಅಂದರೆ ಚಿತ್ರದುರ್ಗದ ಡಿಸ್ಟ್ರಿಕ್ಟ್ ಹರಿಹರ ಮ್ಯುನಿಸಿಪಾಲಿಟಿಯಲ್ಲಿ ಕುಂಬಾರಕೆರೆಗೆ ಹೋಗುವ ರಸ್ತೆಯನ್ನೂ ಮತ್ತು ನಡುವಾಲವೇಟೆ ರಸ್ತೆಯನ್ನೂ ಸುಧಾ ಒಡಂಯಿಸುವ ಬಗ್ಗೆ ಬೇಕಾಗಿರುತ್ತೆ.